## ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನಡವಳಿ

ವಿಷಯ: ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು

ಉಲ್ಲೇಖ:
1) ಸರ್ಕಾರದ ಆದೇಶ ಸಂ: ಸಕಇ 268 ಪಕಸೇ 2015 ದಿ: 03-06-2016
2) ಸರ್ಕಾರದ ಆದೇಶ ಸಂ: ಸಕಇ 268 ಪಕಸೇ 2015 ದಿ: 29-09-2016 ಮತ್ತು ದಿ: 19-11-2016
3) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 02-1-2018 ರಂದು ಜರುಗಿದ ಸಭೆಯ ನಡವಳಿಗಳು
4) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 08-01-2018 ರಂದು ಜರುಗಿದ ಸಭೆಯ ನಡವಳಿಗಳು
5) ಸರ್ಕಾರದ ಆದೇಶ ಸಂಖ್ಯೆ: ಸಕಇ 15 ಪಕಸೇ 2018 ದಿನಾಂಕ 12-01-2018
6) ಅಧಿಕೃತ ಜ್ಞಾಪನ ಸಂಖ್ಯೆ; ದಕಜಿಪ/ಉನಿ/ಎಸ್-4/ನೇ.ನೇ/ಸಿಆರ್-41/2016-17 ದಿನಾಂಕ 28-09-2017
7) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಕನಿ: ಸಿಬ್ಬಂದಿ-11: ಸಿಆರ್-17: 2016-17, ದಿನಾಂಕ:23.01.2018
8) ಸರ್ಕಾರದ ಆದೇಶ ಸಂಖ್ಯೆ: ಸಕಇ 268 ಪಕಸೇ 2015(ಭಾ-1), ದಿನಾಂಕ: 12.03.2018

**********

ಸಂಖ್ಯೆ ದಕಜಿಪ/ಉನಿ/ಎಸ್-4/ನೇ.ನೇ/ಸಿಆರ್-41/2016-17 ದಿನಾಂಕ 13-03-2018

### ಆದೇಶ

ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ.

ಸದರಿ ಹುದ್ದೆಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿರುತ್ತದೆ. ಸದರಿ ಹುದ್ದೆಗೆ ಜಿಲ್ಲಾ ಹಂತದಲ್ಲಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅದರಂತೆ ಅಂತಿಮವಾಗಿ ಆಯ್ಕೆ ಹೊಂದಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಪೂರ್ವದಲ್ಲಿ ಅಭ್ಯರ್ಥಿಗಳ ಪೊಲೀಸ್ ವರದಿ, ಸಿಂಧುತ್ವ ಪ್ರಮಾಣ ಪತ್ರ ಹಾಗೂ ವೈದ್ಯಕೀಯ ದೃಢೀಕರಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದುಕೊಂಡು ಪರಿಶೀಲಿಸಲಾಗಿದೆ.

ಉಲ್ಲೇಖ(7)ರಲ್ಲಿ ಈ ನೇಮಕಾತಿಯ ವಿರುದ್ಧ ಹೊರ ಸಂಪನ್ಮೂಲ ಸಿಬ್ಬಂದಿಗಳು ರಿಟ್ ಅರ್ಜಿ ಸಂಖ್ಯೆ:1914/2018 ಹಾಗೂ ಇತರೆ ಸಂಬಂಧಿತ ಅರ್ಜಿಗಳನ್ನು ದಾಖಲಿಸಿದ್ದು, ಸದ್ರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯವು ವಿಚಾರಣೆ ನಡೆಸಿ ದಿನಾಂಕ: 20.02.2018 ರವರೆಗೆ ಯಾವುದೇ ನೇಮಕಾತಿ ಆದೇಶಗಳನ್ನು ನೀಡದಿರುವಂತೆ/ ಅನುಷ್ಠಾನಗೊಳಿಸದಿರಲು ಸೂಚಿಸಲಾಗಿರುತ್ತದೆ.

ಮುಂದುವರಿದು, ಉಲ್ಲೇಖ(8)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 28485-459/2017 ರಲ್ಲಿ ನೀಡಿರುವ ನಿರ್ದೇಶನ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿರುವುದರಿಂದ ಸದ್ರಿ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಆದೇಶಿಸಲಾಗಿರುತ್ತದೆ.

ಅದರಂತೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ (ಸಾಮಾನ್ಯ ನೇಮಕಾತಿ 1977 ನಿಯಮ 4(1)) ರ ಮೇರೆಗೆ ವೇತನ ಶ್ರೇಣಿ ರೂ. 9600–14550 ರಲ್ಲಿ ನೇರ ನೇಮಕಾತಿಯಡಿ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ವಸತಿ ಶಾಲೆ/ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ನೇಮಕಾತಿ ಮಾಡಿ ತೈನಾತಿಸಲಾಗಿರುತ್ತದೆ.

| ಕ್ರಸಂ | ಆಯ್ಕೆ ಪಟ್ಟಿ ಕ್ರಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಅಡುಗೆ ಸಹಾಯಕರಾಗಿ ನೇಮಕಾತಿ ಮಾಡಿ ನಿಯುಕ್ತಿಗೊಳಿಸಲಾದ ಸ್ಥಳ |
|---|---|---|---|
| 1 | 1 | ಶ್ರೀ ಗಿರೀಶ್ ಎಂ.ಇ, ಜಿಲ್ಲಾ ಆಯುಷ್ ಆಸ್ಪತ್ರೆ ನೆರ ಆಜಾದ್ ಪಾರ್ಕ್ ಹತ್ತಿರ ಚಿಕ್ಕಮಗಳೂರು–577101 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಬೆಳ್ತಂಗಡಿ ತಾಲೂಕು |
| 2 | 1 | ಶ್ರೀ ಕೊಟ್ರಪ್ಪ ಉಮಚಗಿ, ಹರ್ಲಾಪುರ, ಗದಗ ತಾಲೂಕು–582115 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮೂಡಬಿದ್ರೆ, ಮಂಗಳೂರು ತಾಲೂಕು |
| 3 | 14 | ಶ್ರೀ ಮೊಹಿನ್‌ಸಾಬ್ ಹಿರೆವಡ್ರಕಲ್ ತಾಲೂಕು ಯಲಬುರ್ಗಾ, ಕೊಪ್ಪಳ–583237 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಸುಳ್ಯ ತಾಲೂಕು |
| 4 | 9 | ಶ್ರೀಶೈಲ ಒಡೆಯರ್ ಕಂಭಗಿ, ವಿಜಯಪುರ ತಾಲೂಕು, ಬಿಜಾಪುರ–586125 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಕೊಂಬೆಟ್ಟು, ಪುತ್ತೂರು ತಾಲೂಕು |
| 5 | 10 | ಶ್ರೀ ಹನುಮಂತರಾಜು ಕೊಪ್ಪದ್ ಕಂಭಗಿ, ವಿಜಯಪುರ ತಾಲೂಕು, ಬಿಜಾಪುರ–586125 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮುಲ್ಕಿ, ಮಂಗಳೂರು ತಾಲೂಕು |
| 6 | 11 | ಶ್ರೀ ಸುಭಾಸಚಂದ್ರ ಇಟಗಿ ಹಾಲಿಗೇರಿ ಅಂಚೆ, ಬಾದಾಮಿ ತಾಲೂಕು, ಬಾಗಲಕೋಟೆ–587206 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಬಜ್ಪೆ, ಮಂಗಳೂರು ತಾಲೂಕು |
| 7 | 3 | ಶ್ರೀಮತಿ ರಾಜೇಶ್ವರಿ ಹಡಪದ್ ಹುಲಿಕೇರಿ ಅಂಚೆ, ಬಾದಾಮಿ ತಾಲೂಕು ಬಾಗಲಕೋಟೆ–587201 | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯ ಮಾರಿಗುಡಿ, ಮಂಗಳೂರು ತಾಲೂಕು |
| 8 | 12 | ಶ್ರೀ ಮಲ್ಲಪ್ಪ ವೈ ಗುದಗಿ ಹಾಲಿಗೇರಿ ಅಂಚೆ, ಬಾದಾಮಿ ತಾಲೂಕು, ಬಾಗಲಕೋಟೆ–587206 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕದ್ರಿ, ಮಂಗಳೂರು ತಾಲೂಕು |
| 9 | 13 | ಶ್ರೀ ಬೀರಪ್ಪ ಆಡಿನ್ ಬೂದಿಹಾಳ ಗ್ರಾಮ, ಬೈಲಹೊಂಗಲ ತಾಲೂಕು ಬೆಳಗಾಂ–591104 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ ಕದ್ರಿ, ಮಂಗಳೂರು ತಾಲೂಕು |
| 10 | 4 | ಮಲ್ಲಿಕಾ ನಾಯ್ಕ, ಮರ್ತಲೆ ಮನೆ, ಇರುವೈಲು ಗ್ರಾಮ ಮತ್ತು ಅಂಚೆ, ಮೂಡಬಿದ್ರೆ ತಾಲೂಕು, ಮಂಗಳೂರು–574144 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹಾರಾಡಿ, ಪುತ್ತೂರು ತಾಲೂಕು |
| 11 | 5 | ಶ್ರೀಮತಿ ಆಶಾ ಕೆ, ಚನ್ನಪುರ ಅಂಚೆ, ಚನ್ನಗಿರಿ ತಾಲೂಕು ದಾವಣಗೆರೆ–577218 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ವೇಣೂರು, ಬೆಳ್ತಂಗಡಿ ತಾಲೂಕು |

| | | | |
|---|---|---|---|
| 12 | 15 | ಶ್ರೀ ರವಿ ವೈ.ಆರ್ ಬಾಗಿವಾಲು ಗ್ರಾಮ, ಹಳೆಕೋಟೆ ಅಂಚೆ, ಹೊಳೆನರಸೀಪುರ ತಾಲೂಕು ಹಾಸನ-573211 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಕಡಬ, ಪುತ್ತೂರು ತಾಲೂಕು |
| 13 | 6 | ಶ್ರೀಮತಿ ಸುಮಲತಾ ಎಂ.ಕೆ ಕೋಂ ದಯಾನಂದ ಎಸ್.ಎಸ್, ಕೆ.ಆರ್.ಪೇಟೆ ಟೌನ್, ಜಯನಗರ ಬಡಾವಣೆ ಅನಿಕೇತನ ರಸ್ತೆ, ಗರ್ಲ್ಸ್ ಬಿ.ಸಿ.ಎಂ ಹಾಸ್ಟೇಲ್ ಮಂಡ್ಯ-571426 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಬೆಳ್ತಂಗಡಿ ತಾಲೂಕು |
| 14 | 7 | ಸುಮ ಸಿ ಬಿನ್ ಚಂದ್ರಪ್ಪ ಟಿಜೆಸಿಆರ್ Extenshion ಜಗಲೂರು ತಾಲೂಕು ದಾವಣಗೆರೆ-577528 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಬೆಳ್ತಂಗಡಿ ತಾಲೂಕು |
| 15 | 8 | ಶೋಭಾ ಸಿಂಗಿ ಗಲಗಲಿ, ಸಿದ್ಧಾಪುರ ತಾಲೂಕು ಜಮಖಂಡಿ ಬಾಗಲಕೋಟೆ-587301 | ವಸತಿ ಶಾಲೆ, ಜೋಡುಮಾರ್ಗ, ಬಂಟ್ವಾಳ ತಾಲೂಕು |
| 16 | 16 | ಶ್ರೀ ಲತೇಶ್ ಕುಮಾರ್ ಪಿ ಆರ್ಲ ಮನೆ, ಕೊಣಾಲು ಗ್ರಾಮ, ಪುತ್ತೂರು ಅಂಚೆ ಮತ್ತು ತಾಲೂಕು-574229 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಕೊಣಾಲು, ಪುತ್ತೂರು ತಾಲೂಕು |
| 17 | 1 | ಶ್ರೀ ಮಂಜುನಾಥ್ ಅರವಟಗಿ ಬೂದಿಹಾಳ ಅಂಚೆ, ಬೈಲಹೊಂಗಲ ತಾಲೂಕು ಬೆಳಗಾಂ-591104 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮೊಡಂಕಾಪು, ಬಂಟ್ವಾಳ ತಾಲೂಕು |
| 18 | 4 | ಶ್ರೀ ಸತ್ಯಾನಂದ ಮಡಿವಾಳ ಯು, ಕಾಯರ್‌ತಡ್ಕ ಮನೆ, ಅಡ್ಯನಡ್ಕ ಅಂಚೆ, ಕೇಪು ಗ್ರಾಮ, ಬಂಟ್ವಾಳ-574225 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಾರಾಡಿ, ಪುತ್ತೂರು ತಾಲೂಕು |
| 19 | 2 | ಆರ್.ಎನ್.ಶ್ರೀಧರ್ ಮನೆ ನಂ.696 ಸಿಕ್ಕೇರಿ ಕ್ರಾಸ್, ಗಣೇಶ್ ಗಿರಿ, ಕೆ.ಹೆಚ್.ಬಿ. ಕಾಲೋನಿ, ಬಾಗಲಕೋಟೆ-587103 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕೊಡಿಯಾಲ್ ಬೈಲು, ಮಂಗಳೂರು ತಾಲೂಕು |
| 20 | 1 | ಶ್ರೀಮತಿ ಭಾರತಿ ಸಿಂಗಿ ಗೊಟದಕಿ ಕುಲಹಳ್ಳಿ ಅಂಚೆ, ಜಮಖಂಡಿ ತಾಲೂಕು ಬಾಗಲಕೋಟೆ-587301 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಪಾಣೆಮಂಗಳೂರು, ಬಂಟ್ವಾಳ ತಾಲೂಕು |
| 21 | 1 | ಶ್ರೀ ತಿಲಕ್ ಕುಮಾರ್ c/o ರಮೇಶ್ ಭಾರದ್ವಾಜ್ ನಿಲಯ, 13ನೇ ಕ್ರಾಸ್, ನಂದೀಶ್ ಲೇಔಟ್ ಎಸ್.ಐ.ಟಿ ತುಮಕೂರು-572102 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕನ್ಯಾನ, ಬಂಟ್ವಾಳ ತಾಲೂಕು |
| 22 | 3 | ಶ್ರೀಮತಿ ದ್ರಾಕ್ಷಾಯಿಣಿ ಹೊಸಳ್ಳಿ ಆಟಮಳಗಿ ಅಂಚೆ, ಚಿಕ್ಕಮ್ಯಾಗೇರಿ ತಾಲೂಕು, ಯಲಬುರ್ಗಾ-583236 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಸುಳ್ಯ ತಾಲೂಕು |

**ಷರತ್ತುಗಳು:-**

1. ಅಭ್ಯರ್ಥಿಗಳು ಸೇವೆಗೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಪರೀಕ್ಷಾರ್ಥಿಗಳಾಗಿರುತ್ತಾರೆ.
2. ಅಭ್ಯರ್ಥಿಗಳ ನೇಮಕಾತಿಯು ತಾತ್ಕಾಲಿಕವಾಗಿದ್ದು, 1977 ರ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಸೇವಾ ಷರತ್ತುಗಳ ನಿಯಮ/ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ ಹಾಗೂ ಅಭ್ಯರ್ಥಿಯ ಆಯ್ಕೆಯಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ನೇಮಕಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದು ಪಡಿಸಲಾಗುವುದು.

3. ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರುಗಳು ಅಭ್ಯರ್ಥಿಗಳ ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ ದಾಖಲಾತಿ ಹಾಗೂ ಸೇವಾ ಅರ್ಹತೆಗೆ ಸಂಬಂಧಿಸಿದ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಪಡೆಯತಕ್ಕದ್ದು.
4. ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಗಳು 1966 ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು 1957 ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಸರ್ಕಾರದ ನಿಯಮಾವಳಿ/ಆದೇಶಗಳಿಗೆ ಬದ್ಧರಾಗಿರತಕ್ಕದ್ದು
5. ಮೀಸಲಾತಿ ವರ್ಗದಲ್ಲಿ ನೇಮಕಾತಿಗೊಂಡಿರುವ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರಗಳ ದೃಢೀಕರಿಸಿದ ಫೋಟೋ ಪ್ರತಿಗಳನ್ನು ಸೇವಾ ಪುಸ್ತಕದಲ್ಲಿ ಅಂಟಿಸಬೇಕು.
6. ಸೇವಾ ಪುಸ್ತಕದಲ್ಲಿ ಅಭ್ಯರ್ಥಿಗಳ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿ ದೃಢೀಕರಿಸಬೇಕು.
7. ಈ ನೇಮಕಾತಿ ಆದೇಶ ಪಡೆದ 15 ದಿವಸಗೊಳಗಾಗಿ ತೈನಾತಿಸಲಾದ ಸ್ಥಳದಲ್ಲಿ ಕರ್ತವ್ಯ ವರದಿ ಮಾಡಿಕೊಳ್ಳತಕ್ಕದ್ದು. ನಿಗಧಿತ ದಿನಾಂಕದೊಳಗೆ ಕರ್ತವ್ಯ ವರದಿ ಮಾಡಿಕೊಳ್ಳದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕರ್ನಾಟಕ ಸಿವಿಲ್ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977 ರನ್ವಯ ನೇಮಕಾತಿ ಆದೇಶವನ್ನು ರದ್ದುಗೊಳಿಸಲಾಗುವುದು.
8. ಅಭ್ಯರ್ಥಿಗಳ ಜೇಷ್ಠತೆಯನ್ನು ಕರ್ನಾಟಕ ನಾಗರೀಕ ಸೇವಾ (ಜೇಷ್ಠತಾ) ನಿಯಮ 1957 ರನ್ವಯ ಆಯ್ಕೆ ಪಟ್ಟಿಯ ಕ್ರಮಾಂಕದ ಮೇಲೆ ಪರಿಗಣಿಸಲಾಗುವುದು.
9. ಅಭ್ಯರ್ಥಿಯು ಸರ್ಕಾರದ ಆದೇಶ ಸಂಖ್ಯೆ:- FD/SPL/04/PET/05 ದಿನಾಂಕ: 31.03.2006 ರಂತೆ ಎನ್.ಪಿ.ಎಸ್ ಯೋಜನೆಗೆ ಒಳಪಟ್ಟಿರುತ್ತಾರೆ. ದಿನಾಂಕ: 01.04.2006 ರ ನಂತರ ಸರ್ಕಾರಿ ಸೇವೆಗೆ ನೇಮಕಗೊಂಡ ನೌಕರರ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತದ ಶೇಕಡಾ 10% ರಷ್ಟು ಭಾಗವನ್ನು ಅವರ ಪ್ರತಿ ಮಾಹೆಯ ವೇತನದಲ್ಲಿ ನಿವೃತ್ತಿ ಸೌಲಭ್ಯದ ವಂತಿಕೆಯನ್ನು ಕಟಾಯಿಸುವುದು.
10. ಅಭ್ಯರ್ಥಿಗಳು ನಿಗದಿತ ಮೊತ್ತಕ್ಕೆ ಕಡ್ಡಾಯವಾಗಿ ವಿಮೆ (KGID) ಮಾಡಿಸತಕ್ಕದ್ದು. ಹಾಗೂ ಸಮೂಹ ವಿಮೆ ಮಾಡಿಸತಕ್ಕದ್ದು.
11. ಮದುವೆ ಆಗಿಲ್ಲ ಅಥವಾ / ಆಗಿದ್ದರೆ ಒಬ್ಬರಿಗಿಂತ ಹೆಚ್ಚು ಪತಿ / ಪತ್ನಿಯನ್ನು ಹೊಂದಿಲ್ಲವೆಂಬ ಬಗ್ಗೆ ಘೋಷಣೆ ಪತ್ರ ಸಲ್ಲಿಸಬೇಕು
12. ಸಂಬಂಧಿಸಿದ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರುಗಳು ನೇಮಕಾತಿ ಆದೇಶದ ಪ್ರಕಾರ ನೇಮಕಗೊಂಡ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಬಗ್ಗೆ ಈ ಕಛೇರಿಗೆ ತಪ್ಪದೇ ವರದಿ ಮಾಡುವುದು. ಜಿಲ್ಲಾಧಿಕಾರಿಗಳಿಂದ ಪ್ರಥಮ ವೇತನ ಪ್ರಮಾಣ ಪತ್ರವನ್ನು ಪಡೆದ ನಂತರ ಅಭ್ಯರ್ಥಿಗಳಿಗೆ ವೇತನ ಪಾವತಿಸತಕ್ಕದ್ದು.

ಈ ಆದೇಶದಲ್ಲಿರುವ ಎಲ್ಲಾ ಅಂಶಗಳನ್ನು ಸಂಬಂಧಪಟ್ಟ ಅಭ್ಯರ್ಥಿಗಳು ಹಾಗೂ ಅಧಿಕಾರಿಗಳು ಚಾಚೂ ತಪ್ಪದೇ ಪಾಲಿಸುವುದು.

ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ.

ಪ್ರತಿಯನ್ನು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
3. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ.
4. ಜಿಲ್ಲಾ ಖಜಾನಾಧಿಕಾರಿ, ದ.ಕ. / ತಾಲ್ಲೂಕು ಖಜಾನಾಧಿಕಾರಿ, ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ.
5. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

6. ಸಹಾಯಕ ನಿರ್ದೇಶಕರು (ಗ್ರೇಡ್-1 ಮತ್ತು 2), ಸಮಾಜ ಕಲ್ಯಾಣ ಇಲಾಖೆ, ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುರವರಿಗೆ ಸೂಕ್ತ ಕ್ರಮಕ್ಕಾಗಿ..
7. ಸಂಬಂಧಿಸಿದ ಅಭ್ಯರ್ಥಿಗಳಿಗೆ ನೊಂದಣಿ ಅಂಚೆ ಮೂಲಕ
8. ಕಛೇರಿ ಪ್ರತಿ / ಇತರೆ.